(ಅ) ಈ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿರುವುದಿಲ್ಲ.

(ಇ) ಇಲ್ಲ.

(ಈ) ಈ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿರುವುದಿಲ್ಲ.

413. ಶ್ರೀ ಸೋಮಣ್ಣ ವಿ. (ಬನ್ನಿಪೇಟೆ) ಮಾನ್ಯ ಕಂದಾಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) 2006ರಿಂದ ಇಲ್ಲಿಯವರೆಗೆ ಬೆಂಗಳೂರು ಸುತ್ತಮುತ್ತ ಎಷ್ಟು ಎಕರೆ ಒತ್ತುವರಿ ಭೂಮಿಯನ್ನು ತೆರವುಗೊಳಿಸಿ ಸ್ವಾಧೀನಪಡಿಸಿಕೊಳ್ಳಲಾಗಿದೆ;

(ಆ) ಸ್ವಾಧೀನಪಡಿಸಿಕೊಳ್ಳಲಾದ ಭೂಮಿಯಲ್ಲಿ ಎಷ್ಟು ಎಕರೆ ಭೂಮಿಯನ್ನು ಹರಾಜು ಮಾಡಲಾಗಿದೆ ಹಾಗೂ ಅದರಿಂದ ಬಂದ ಹಣವೆಷ್ಟು;

(ಇ) ಈ ರೀತಿ ಸ್ವಾಧೀನಪಡಿಸಿಕೊಳ್ಳಲಾದ ಜಾಗಗಳಲ್ಲಿ ನಿವೇಶನಗಳನ್ನು ನಿರ್ಮಿಸಿ ಬಡರಿಗೆ ಹಂಚಿಕೆ ಮಾಡಲು ಸರಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಕಂದಾಯ ಸಚಿವರು)

(ಅ) ಬೆಂಗಳೂರು ಸುತ್ತಮುತ್ತ 8924–22 ಎಕರೆ ಜಮೀನನ್ನು ತೆರವುಗೊಳಿಸಿ ಸ್ವಾಧೀನಪಡಿಸಿಕೊಳ್ಳಲಾಗಿದೆ.

(ಆ) ಸ್ವಾಧೀನಪಡಿಸಿಕೊಳ್ಳಲಾದ ಜಮೀನಿನ ಪೈಕಿ 1183–06 ಎಕರೆ ಹರಾಜು ಮಾಡಲಾಗಿದ್ದು, ಈ ಪೈಕಿ ಸರ್ಕಾರದಿಂದ 297 ಎಕರೆ ಮಾತ್ರ ಸ್ಥಿರೀಕರಣಗೊಂಡಿದೆ.

ಈ ಹರಾಜಿನಿಂದ ಒಟ್ಟು ಮೊತ್ತ ರೂ. 311.ಕೋಟಿ ಹಣ ಅಂತಿಮ ಬಿಡ್‌ನಲ್ಲಿ ದೊರೆತಿದ್ದು ಈ ಪೈಕಿ ರೂ. 199.33 ಕೋಟಿ ಮೊತ್ತವನ್ನು ಸರ್ಕಾರದ ಬೊಕ್ಕಸಕ್ಕೆ ಜಮಾ ಮಾಡಿದೆ. ಈ ಮಧ್ಯೆ ಗೌರವಾನ್ವಿತ ಉಚ್ಚ ನ್ಯಾಯಾಲಯವು ಸಾರ್ವಜನಿಕ ಹಿತಾಸಕ್ತಿ ಅರ್ಜಿಯೊಂದರಲ್ಲಿ ಹರಾಜಿನ ಸ್ಥಿರೀಕರಣವು ಈ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ಅಂತಿಮ ನಿರ್ಣಯ ಷರತ್ತಿಗೆ ಒಳಪಟ್ಟಿದೆ ಎಂದು ಆದೇಶ ನೀಡಿದೆ. ಆದ್ದರಿಂದ ಈ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಲೇ ಆದ ತಕ್ಷಣ ಬಾಕಿ ಮೊತ್ತ ರೂ. 111.67 ಕೋಟಿಯನ್ನು ವಸೂಲಿ ಮಾಡಲಾಗುವುದು.

(ಇ) ಬೆಂಗಳುರು ಸುತ್ತಮುತ್ತಲು ಒತ್ತುವರಿಯಾಗಿದ್ದ ಸರ್ಕಾರಿ ಜಮೀನುಗಳನ್ನು ಖಿಲ್ಲಾಪಡಿಸಿ ಬಡವರಿಗೆ ಮನೆ ಹಂಚಿಕೆ ಮಾಡಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ 326–18 ಎಕರೆ ಜಮೀನು ಹಂಚಿಕೆ ಮಾಡಲಾಗಿದೆ.

ಉಳಿದಂತೆ ಕರ್ನಾಟಕ ಗೃಹಮಂಡಳಿಗೆ ನಿವೇಶನಗಳನ್ನು ಮಾಡಿ ಬಡವರಿಗೆ ಹಂಚಲು ಜಮೀನು ಹಂಚಿಕೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆ.

426. ಶ್ರೀ ಹಾಲಪ್ಪ ಹೆಚ್. (ಹೊಸನಗರ) ಮಾನ್ಯ ಕಂದಾಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ರಿಪ್ಪನ್‌ಪೇಟೆ ಗವಟೂರು ಸರ್ವೆ ನಂ.329ರಲ್ಲಿ 32 ಗುಂಟೆ ಜಾಗ ಯಾವ ದಿನಾಂಕದಂದು ಭೂ ಪರಿವರ್ತನೆಯಾಗಿದೆ;

(ಆ) ತಹಶೀಲ್ದಾರ್ ಅಥವಾ ಉಪ ವಿಭಾಗಾಧಿಕಾರಿಯಿಂದ ಭೂ ಪರಿವರ್ತನೆಯಾದ ಬಗ್ಗೆ ಆದೇಶವಾಗಿದೆಯೇ;

(ಇ) ಹಾಗಿದ್ದಲ್ಲಿ, ಆದೇಶದ ಸಂಖ್ಯೆ ತಿಳಿಸುವುದು.

(ಈ) ಭೂ ಪರಿವರ್ತನೆಯನ್ನು ಯಾವ ಉದ್ದೇಶಕ್ಕಾಗಿ ಮಾಡಲಾಗಿದೆ, ಈ ಬಗ್ಗೆ ಹಕ್ಕು ಬದಲಾವಣೆಯಾಗಿದೆಯೇ;

(ಉ) R.R.5, R.R.6 ಆಕಾರ್‌ಬಂದ್‌ನಲ್ಲಿ ಭೂ ಪರಿವರ್ತನೆಯಾದ ಬಗ್ಗೆ ನಮೂದು ಆಗಿದೆಯೇ;

(ಊ) ಇದಕ್ಕೆ ಲೇಔಟ್ ನಕ್ಷೆ ಮಾಡಲಾಗಿದೆಯೇ?

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಕಂದಾಯ ಸಚಿವರು)

(ಅ) ರಿಪ್ಪನ್ ಪೇಟೆ ಗವಟೂರು ಸ.ನಂ. 329ರಲ್ಲಿ ಒಟ್ಟು ವಿಸ್ತೀರ್ಣ 0–32ಗುಂಟೆ ಇದ್ದು, ಈ ಪೈಕಿ 0–16 ಗುಂಟೆ ವಿ.ಪಿ. ಅಲಿನೇಷನ್ ಎಂದು 0–16 ಗುಂಟೆ ಸರ್ಕಾರಿ ಫಡಾ ಎಂದು ಪಹಣಿಯಲ್ಲಿ ನಮೂದಾಗಿದೆ. 0–16 ಗುಂಟೆ ಭೂ ಪರಿವರ್ತನೆಯಾದ ಬಗ್ಗೆ ಆದೇಶವಿರುವುದಿಲ್ಲ.

(ಆ) ಇಲ್ಲ. (ಇ) ಉದ್ಭವಿಸುವುದಿಲ್ಲ.